ಶ್ರೀ ಬಿ.ಬಿ. ನಿಂಗಯ್ಯ : ಮಾನ್ಯ ಅಧ್ಯಕ್ಷರೆ, ಅವರು ಹೇಳಿದ ಹಾಗೆ ಈ ತಳಿಗಳನ್ನು ಅಭಿವೃದ್ಧಿಪಡಿಸಬೇಕು ಎನ್ನುವ ದೃಷ್ಟಿಯಿಂದ ಈ ಬಾರಿ ರಾಜ್ಯದಲ್ಲಿ ಹಳ್ಳಿಕಾರ್‌ತಳಿ ಮತ್ತು ಅಮೃತ್‌ಮಹಲ್ ತಳಿಗಳಿಗೆ ರಾಜ್ಯಸರ್ಕಾರ ಮತ್ತು ಕೇಂದ್ರ ಸರ್ಕಾರದ ಪುರಸ್ಕೃತ ಯೋಜನೆಯಡಿ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು 20 ಲಕ್ಷ ರೂಪಾಯಿಗಳನ್ನು ನಾವು ಅದಕ್ಕಾಗಿ ಇಟ್ಟಿದ್ದೇವೆ. ಸದರಿ ತಳಿ ರಾಸಿನಲ್ಲಿ ಜನಿಸಿದ ಕರುವೊಂದಕ್ಕೆ ಸುಮಾರು 250 ರೂಪಾಯಿಯನ್ನು ಕೊಡತಕ್ಕಂಥಾದ್ದು ಇದೆ.

ಅಧ್ಯಕ್ಷರು : ದಯಮಾಡಿ ಪ್ರಶ್ನೆಯನ್ನು ಅರ್ಥ ಮಾಡಿಕೊಳ್ಳಿ, ವಿದೇಶಿ ತಳಿಗಳನ್ನು ತರಿಸುತ್ತಾ ಇರುವಂತದ್ದು ಹೆಚ್ಚು ಹಾಲು ಉತ್ಪಾದನೆಗಷ್ಟೆ ಸಹಕಾರಿಯಾಗುತ್ತದೆ, ಕೃಷಿ ಕ್ಷೇತ್ರಕ್ಕೆ ನಮ್ಮ ಕರುಗಳು ಯಾವುದು ಆ ವಿದೇಶಿ ತಳಿಗಳಿಂದ ಹುಟ್ಟುತ್ತವೆ ಆ ಕರುಗಳು ನಮ್ಮ ಕೃಷಿ ಕ್ಷೇತ್ರಕ್ಕೆ ಕೆಲಸಕ್ಕೆ ಬರುವುದಿಲ್ಲ ನಮ್ಮ ದೇಶದ ವಾತಾವರಣಕ್ಕೆ ಒಗ್ಗಿಕೊಂಡಿರುವ ಈ ಹಳ್ಳಿಕಾರ್, ಅಮೃತ್‌ಮಹಲ್ ಕೃಷ್ಣ ತಳಿಗಳು ಯಾವುವು ಇವೆ ಅವುಗಳ ಸೆಮೆನನ್ನು ಸ್ಥಳೀಯ ಸೆಮೆನ್ಸ್ ಬ್ಯಾಂಕ್ಸ್ ಮುಖಾಂತರ ಸಪ್ಲೈ ಮಾಡಿ ಎಂದು ಅವರು ಹೇಳುತ್ತಿದ್ದಾರೆ.

ಶ್ರೀ ಬಿ.ಬಿ. ನಿಂಗಯ್ಯ : ಅದನ್ನು ಸರ್ಕಾರ ಆಲೋಚನೆ ಮಾಡುತ್ತಿದೆ ಅದನ್ನು ಮಾಡುತ್ತೇವೆ.

ಶ್ರೀ ಸಿ.ಎಚ್. ವಿಜಯಶಂಕರ್ : ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರ ಹಾಗೂ ಅಕ್ಕಪಕ್ಕದ ತಾಲ್ಲೂಕುಗಳಲ್ಲಿ ವಾರಕ್ಕೊಂದು ಸಲ ದನಗಳ ಸಂತೆ ನಡೆಯುತ್ತದೆ. ಇದರಲ್ಲಿ ಮಾರಾಟ ವಾಗುವಂತ 50 ಭಾಗದ ದನಗಳು ಮುಕ್ತವಾಗಿ ಪಕ್ಕದ ರಾಜ್ಯಗಳ ಕಸಾಯಿಖಾನೆಗೆ ಹೋಗುತ್ತಿವೆ.

ಅಧ್ಯಕ್ಷರು : ಏನು ಮಾಡುವುದು, ಯಡಿಯೂರಪ್ಪನವರು ಅದನ್ನು ಪ್ರಸ್ತಾಪ ಮಾಡಿದರು, ಒಬ್ಬರ ಆಹಾರ ಇನ್ನೊಬ್ಬರಿಗೆ ವಿಷ, ಇಂಗ್ಲೀಷ್‌ನಲ್ಲಿ ಪ್ರಾವರ್ಬ್ ಇದೆ, One man food is another man poison.

ಶ್ರೀ ಹೆಚ್.ಡಿ. ಬಸವರಾಜು : ಗೋಹತ್ಯೆ ನಿಷೇಧದ ಬಗ್ಗೆ ಸರ್ಕಾರ ಒಂದು ಸ್ಪಷ್ಟನೆ ಮಾಡಬೇಕು. ದನಗಳನ್ನು ಲಾರಿಗಳಲ್ಲಿ ಸಾಗಿಸುವಂಥದ್ದನ್ನು ನೀವು ನೋಡಿದಿರಿ ಎಂದರೆ ನಿಜವಾಗಿಯೂ ನಿಮ್ಮ ಕಣ್ಣಿನಲ್ಲಿ ನೀರು ಬರುತ್ತವೆ.

ಅಧ್ಯಕ್ಷರು : ಮಾನ್ಯ ಸದಸ್ಯರು ದಯಮಾಡಿ ಕುಳಿತುಕೊಳ್ಳಬೇಕು.

ಶೋರಾಪುರ ತಾಲ್ಲೂಕು ಕ್ರೀಡಾಂಗಣ.

2486 - ಶ್ರೀ ರಾಜಾ ವೆಂಕಟಪ್ಪ ನಾಯಕ್ (ಶೋರಾಪುರ) : ಮಾನ್ಯ ಮಿನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶೋರಾಪುರ ತಾಲ್ಲೂಕು ಕ್ರೀಡಾಂಗಣ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೆ?

ಆ) ಹಾಗಿದ್ದಲ್ಲಿ, ಈ ಕ್ರೀಡಾಂಗಣ ನಿರ್ಮಾಣ ಯಾವ ಹಂತದಲ್ಲಿದೆ?

ಶ್ರೀ ಆಜಯಕುಮಾರ್ ಸರ್ ನಾಯಕ್ (ಯುವ ಜನ ಸೇವಾ ಮತ್ತು ಕ್ರೀಡಾ ಸಚಿವರು) :

ಅ) ಇದೆ

ಆ) ನಿವೇಶನವನ್ನು ಯುವಜನ ಸೇವಾ ಹಾಗೂ ಕ್ರೀಡಾ ಇಲಾಖೆಗೆ ವರ್ಗಾಯಿಸಿದ ನಂತರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ರಾಜಾವೆಂಕಟಪ್ಪ ನಾಯಕ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಉತ್ತರವನ್ನು ಒದಗಿಸಿದ್ದಾರೆ. ಶೋರಾಪುರ ತಾಲ್ಲೂಕು ಕ್ರೀಡಾಂಗಣ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ಎಂದು ಕೇಳಿದ್ದಕ್ಕೆ ಇದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಈ ಕ್ರೀಡಾಂಗಣ ಯಾವ ಹಂತದಲ್ಲಿದೆ ಎಂದು ಕೇಳಿದರೆ ಅದಕ್ಕೆ ನಿವೇಶನ ವರ್ಗಾವಣೆ ಆಗಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಈ ಉತ್ತರ ಸಮಂಜಸವಾಗಿಲ್ಲ. ಏಕೆಂದರೆ ಹೆಚ್.ಕೆ.ಡಿ.ಬಿ.ಯಲ್ಲಿ 1994-95ರ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ನಿವೇಶನವನ್ನು ತೆಗೆದುಕೊಂಡಿದೆ. ಒಂದು ನಿವೇಶನವನ್ನು ವರ್ಗಾವಣೆ ಮಾಡಲಿಕ್ಕೆ 3 ವರ್ಷಗಳ ಕಾಲಾವಕಾಶ ತೆಗೆದುಕೊಳ್ಳುತ್ತಾರೆ. ಇದರ ಕೆಲಸವನ್ನು ಮಾಡಿಸುವುದಕ್ಕೆ ಪ್ರತಿ ವರ್ಷ 15 ಲಕ್ಷ, 20 ಲಕ್ಷ ರೂಪಾಯಿಗಳು ಬಿಡುಗಡೆಯಾಗುತ್ತದೆ. ಅದನ್ನು ಖರ್ಚು ಮಾಡಲಿಕ್ಕೆ ತಯಾರಿಲ್ಲ. ಈ ಕೆಲಸವನ್ನು ಪ್ರಾರಂಭ ಮಾಡುವುದಕ್ಕೆ ತಯಾರಿಲ್ಲ. ಆದ್ದರಿಂದ ಈ ಕೆಲಸವನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ಮತ್ತು ಯಾವಾಗ ಪೂರ್ಣಗೊಳಿಸುತ್ತೀರಿ ಎಂಬುದನ್ನು ದಯಮಾಡಿ ಹೇಳಬೇಕೆಂದು ತಮ್ಮ ಮೂಲಕ ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ (ಯುವ ಜನ ಮತ್ತು ಕ್ರೀಡಾ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, 7 ಎಕರೆ 20 ಸೆಂಟ್ಸ್ ಜಾಗವನ್ನು ತಳವಾರಗೇರಿಯಲ್ಲಿ ಗುರುತಿಸಲಾಗಿದೆ. ಅಂದಾಜು ಪಟ್ಟಿ ಮತ್ತು ನೀಲಿ ನಕಾಶೆಯನ್ನು ತಯಾರಿಸಿ ರಾಜ್ಯಸರ್ಕಾರದಿಂದ ಅಡಳಿತಾತ್ಮಕವಾದ ಅನುಮೋದನೆಯನ್ನು ಕೊಟ್ಟು ಅತಿ ಶೀಘ್ರದಲ್ಲಿಯೇ ಇದನ್ನು ಮಾಡಿಸಲಿಕ್ಕೆ ಪ್ರಯತ್ನವನ್ನು ಮಾಡುತ್ತೇವೆ.

ಶ್ರೀ ರಾಜಾ ವೆಂಕಟಪ್ಪ ನಾಯಕ್ : ಮಾನ್ಯ ಅಧ್ಯಕ್ಷರೆ, ಯಾರು ಆ ಕೆಲಸವನ್ನು ಪ್ರಾರಂಭ ಮಾಡಬೇಕೆಂದು ಜಿಲ್ಲಾ ಪರಿಷತ್ತಿನ ಇಂಜಿನಿಯರುಗಳಿಗೂ ಮತ್ತು ಲೋಕೋಪಯೋಗಿ ಇಲಾಖೆಗೂ ಗೊಂದಲ ಇದೆ. ಜಿಲ್ಲಾಪರಿಷತ್ತಿನವರನ್ನು ಕೇಳಿದರೆ ಲೋಕೋಪಯೋಗಿ ಇಲಾಖೆಯವರ ಮೇಲೆ ಹೇಳುತ್ತಾರೆ, ಲೋಕೋಪಯೋಗಿ ಇಲಾಖೆಯವರನ್ನು ಕೇಳಿದರೆ ಜಿಲ್ಲಾಪರಿಷತ್ತಿನವರ ಮೇಲೆ ಹೇಳುತ್ತಾರೆ. ಆದ್ದರಿಂದ ಈ ಕೆಲಸವನ್ನು ಯಾರು ಮಾಡಬೇಕೆಂಬುದಕ್ಕೆ ಸರ್ಕಾರದ ಕಡೆಯಿಂದ ಡೈರೆಕ್ಷನ್ಸ್ ಕೊಡಬೇಕು. ಇವರುಗಳ ನಡುವೆ ಈ ರೀತಿ ಗೊಂದಲ ಇರುವುದರಿಂದ ಈ ಕೆಲಸ ಮಾಡಿಸುವುದಕ್ಕೆ ಡಿಲೇ ಆಗುತ್ತಿದೆ. ನಿವೇಶನವನ್ನು ವರ್ಗಾವಣೆ ಮಾಡಿಸುವುದಕ್ಕೆ ಯಾರೂ ಕೂಡ ಪ್ರಯತ್ನವನ್ನು ಮಾಡುತ್ತಿಲ್ಲ. ಆದ್ದರಿಂದ ದಯವಿಟ್ಟು ಆದಷ್ಟು ಶೀಘ್ರದಲ್ಲಿಯೇ ಇದನ್ನು ಮಾಡಿಕೊಡಬೇಕು ಎಂದು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೆ, ಆ ಸಣ್ಣ ಸಮಸ್ಯೆ ಏನು ಇದೆ ಅದಕ್ಕೆ ನಾವು ಕೂಡಲೇ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ಅಲ್ಲಿ ಬೇಗ ಕೆಲಸ ಪ್ರಾರಂಭ ಮಾಡಿಸಿ, ನಾವೆಲ್ಲ ಅಲ್ಲಿಗೆ ಬರುತ್ತೇವೆ.